# ವಿಶ್ವಪಾರಂಪರಿಕ ತಾಣ ಪಟ್ಟದಕಲ್ಲಿನ ಸ್ಮಾರಕಗಳ ಸಂರಕ್ಷಣೆ ಹಾಗೂ ಜವಾಬ್ದಾರಿಗಳು

ಎಸ್. ಎಸ್. ಘಂಟಿಮಠ
ಮುಖ್ಯಸ್ಥರು, ಇತಿಹಾಸ ವಿಭಾಗ, ಕುಮಕಾಲೆ ಪದವಿ ಮಹಾವಿದ್ಯಾಲಯ, ಮುಧೋಳ.

DOI: https://doi.org/10.5281/zenodo.17296014

## ABSTRACT:

ಬಾಗಲಕೋಟೆ ಜಿಲ್ಲೆಯ ಪ್ರಸಿದ್ಧ ವಿಶ್ವ ಪರಂಪರೆಯ ತಾಣವಾದ ಪಟ್ಟದಕಲ್ಲು ಐತಿಹಾಸಿಕ ತಾಣಗಳಲ್ಲಿ ಒಂದಾಗಿದೆ. ಇದು ಬಾದಾಮಿ ಚಾಲುಕ್ಯರ ಕಾಲದ ಐತಿಹಾಸಿಕ ಸ್ಥಳವಾಗಿದ್ದು, ಬಾದಾಮಿಗೆ 10 ಕಿ.ಮೀ ದೂರದಲ್ಲಿದೆ. ಮಲಪ್ರಭಾ ನದಿಯ ದಡದಲ್ಲಿರುವ ಇದಕ್ಕೆ ಕಸುವೊಳಲು ಅಥವಾ ಕಿಸುವೊಳಲು ಎಂದು ಕರೆಯುವರು. ಇಲ್ಲಿ ಕ್ರಿ.ಶ 6ನೇ ಶತಮಾನದಿಂದ 10ನೇ ಶತಮಾನದವರೆಗೂ ಬಾದಾಮಿ ಚಾಲುಕ್ಯರು ಹಾಗೂ ರಾಷ್ಟ್ರಕೂಟರ ಕಾಲದಲ್ಲಿ ಉಚ್ಚ್ರಾಯ ಸ್ಥಿತಿಗೇರಿತ್ತು.

"ಸ್ಥಳೀಯ ಶಾಸನಗಳಲ್ಲಿ ಇದನ್ನು ಪಟ್ಟಬಂಧೋತ್ಸಹ ಸಕಲ ವಿಷಯ ಪಟ್ಟಣಾಧಿಪತಿ ಶ್ರೀಮತಿ ಕಿಸುವೊಳಲ್" ಎಂದು ಕರೆಯುವರು. ಇದನ್ನು 1987 ರಲ್ಲಿ ವಿಶ್ವಪರಂಪರೆ ಪಟ್ಟಿಗೆ ಸೇರಿಸಲಾಗಿದೆ. ಇಲ್ಲಿ ಚಾಲುಕ್ಯ ರಾಜರಾದ ವಿಜಯಾದಿತ್ಯ ಮತ್ತು 2ನೇ ವಿಕ್ರಮಾದಿತ್ಯನ ಕಾಲದಲ್ಲಿ ನಿರ್ಮಾಣಗೊಂಡಿರುವ 10 ದೇವಾಲಯಗಳಿವೆ. ಚಾಲುಕ್ಯರ ಕಾಲದಲ್ಲಿ ಪಟ್ಟದಕಲ್ಲು ವಾಸ್ತುಶಿಲ್ಪದ ಪ್ರಯೋಗಶಾಲೆಯಾಗಿತ್ತು. ಹೀಗಾಗಿ ದ್ರಾವಿಡ, ವೇಸರ ಹಾಗೂ ನಾಗರ ಶೈಲಿಯ ದೇವಾಲಯಗಳನ್ನು ಇಲ್ಲಿ ಕಾಣಬಹುದು. ಪಟ್ಟದಕಲ್ಲಿನ ಪ್ರಮುಖ ದೇವಾಲಯಗಳೆಂದರೆ: ವಿರೂಪಾಕ್ಷ ದೇವಾಲಯ, ಮಲ್ಲಿಕಾರ್ಜುನ ದೇವಾಲಯ, ಪಾಪನಾಥ ದೇವಾಲಯ, ಗಳಗನಾಥ ದೇವಾಲಯ, ಜೈನ ನಾರಾಯಣ ದೇವಾಲಯ ಮುಂತಾದವುಗಳು.

## KEYWORDS:

ಔತ್ತರೇಯ, ರಂಗಮಂಟಪ, ಸೋಪಾನ, ಮುಖಮಂಟಪ, ಜಾಲಂಧ್ರ, ಸುಕನಾಸಿ.

**ಪೀಠಿಕೆ:**

ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ಸಮಗ್ರವಾಗಿ ಪುನರಚಿಸುವ ನಿಟ್ಟಿನಲ್ಲಿ ದೇವಾಲಯಗಳ ಪಾತ್ರ ಬಹುಮುಖ್ಯವೆನಿಸುತ್ತದೆ. ಅಂತಹ ದೇವಾಲಯಗಳ ವಿಶ್ಲೇಷಣೆ ಮತ್ತು ಪ್ರಕಟಣೆ ಒಂದು ನಾಡಿನ ನರನಾಡಿಗಳೆನಿಸಿದ ಗ್ರಾಮಗಳಿಂದ ಪ್ರಾರಂಭವಾದಾಗ ಮಾತ್ರ ಆ ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ವಸ್ತುನಿಷ್ಠವಾಗಿ ಪುನರಚಿಸಬಹುದು. ಆ ನಿಟ್ಟಿನಲ್ಲಿ ಐತಿಹಾಸಿಕವಾಗಿ ಹೆಸರುವಾಸಿಯಾದ ಪಟ್ಟದಕಲ್ಲಿನ ದೇವಾಲಯಗಳ ಅಧ್ಯಯನವು ಹಲವಾರು ದೃಷ್ಟಿಕೋನಗಳಿಂದ ಯೋಗ್ಯವಾಗಿದೆ. ಇವು ಸ್ಥಳೀಯ ಮತ್ತು ನಾಡಿನ ರಾಜಕೀಯ ಆಡಳಿತ, ವಾಸ್ತುಶಿಲ್ಪ, ಸಾಹಿತ್ಯ, ಧರ್ಮ, ಆರ್ಥಿಕ, ಸಾಮಾಜಿಕ ಮೊದಲಾದ ಕ್ಷೇತ್ರಗಳನ್ನು ಅರಿಯಲು ಬಹು ಉಪಯುಕ್ತವಾಗಿದೆ. ಆದ್ದರಿಂದ ಪಟ್ಟದಕಲ್ಲಿನ ಕ್ಷೇತ್ರಕಾರ್ಯವನ್ನು ಕೈಗೊಂಡು ಸ್ಥಳೀಯ ಪ್ರಾಚೀನ ದೇವಾಲಯಗಳು, ಶಿಲ್ಪಗಳು ಮತ್ತು ಸ್ಮಾರಕಗಳನ್ನು ಅಧ್ಯಯನ ಮಾಡುವುದು ಸಮಂಜಸವೆನಿಸುತ್ತದೆ. ಜೊತೆಗೆ ಸ್ಥಳೀಯ ದೇವಾಲಯಗಳಿಗೆ ಅರಸು ಮನೆತನಗಳು, ಸ್ಥಳೀಯ ಅಧಿಕಾರಿಗಳು, ವೃತ್ತಿ ಜನ ಸಮುದಾಯದವರು ನೀಡಿದ ಪ್ರೋತ್ಸಾಹ ಹಾಗೂ ಆ ದೇವಾಲಯಗಳ ವಾಸ್ತು ವಿನ್ಯಾಸದಲ್ಲಿರುವ ಸಾಮ್ಯತೆ ಮತ್ತು ಭಿನ್ನತೆಗಳನ್ನು ಅಭ್ಯಸಿಸಿ ಅವುಗಳನ್ನು ಸಂಪೂರ್ಣವಾಗಿ ಅಧ್ಯಯನ ಮಾಡಬಹುದು.

**ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ ಮತ್ತು ರಕ್ಷಣೆ:**

ಇತಿಹಾಸ ಮತ್ತು ಪುರಾತತ್ವ ಶಾಸ್ತ್ರದ ಅಸ್ತಿತ್ವಕ್ಕೆ ಪ್ರಾಚ್ಯ ವಸ್ತುಗಳು ಮತ್ತು ಪ್ರಾಚ್ಯ ಅವಶೇಷಗಳು ಗತ ಸಂಸ್ಕೃತಿಯ ಪುನಾರಚನೆಗೆ ಅತಿ ಮಹತ್ವದ ಪುರಾವೆಗಳಾಗಿವೆ. ಇಂತಹ ವಸ್ತು ಅವಶೇಷಗಳು ತಮ್ಮ ಮೂಲ ರೂಪದಲ್ಲಿ ದೊರೆಯುವುದು ಅಪರೂಪ. ವಾತಾವರಣ ಮತ್ತು ಅವುಗಳ ಅಧ್ಯಯನ ನಡೆಸಲು ಅಥವಾ ಮುಂದೆ ಪುನಃ ಪರಿಶೀಲಿಸಲು ಅವು ಅತ್ಯಗತ್ಯ. ಇವು ಕಲ್ಲು, ಮಣ್ಣು, ಕಟ್ಟಿಗೆ, ಲೋಹ ಇತ್ಯಾದಿ ಸಾಮಾಗ್ರಿಗಳಿಂದ ತಯಾರಿಸಲಾಗುತ್ತದೆ. ಗಾಳಿ, ಬಿಸಿಲು, ಮಳೆ, ಚಳಿಗಳಿಂದ ಕಲ್ಲಿನಂಥ ಗಟ್ಟಿ ಸಾಮಾಗ್ರಿಗಳು ಶಿಥಿಲವಾಗುತ್ತವೆ. ಕಟ್ಟಿಗೆಯಂತಹ ಸಾವಯವ ಸಾಮಾಗ್ರಿಯಿಂದ ತಯಾರಾದ ವಸ್ತುಗಳು ವಾತಾವರಣದಿಂದಷ್ಟೇ ಅಲ್ಲದೆ ಕ್ರಿಮಿಕೀಟಗಳಿಂದಲೂ ಹಾಳಾಗುತ್ತವೆ. ಆದುದರಿಂದ ಅವುಗಳನ್ನು ರಕ್ಷಿಸುವ ಮತ್ತು ಸಂರಕ್ಷಿಸುವ ಜವಾಬ್ದಾರಿ ಮಹತ್ವದ್ದಾಗುತ್ತದೆ.

**ವಿಶ್ವಪಾರಂಪರಿಕ ತಾಣವಾದ ಪಟ್ಟದಕಲ್ಲಿನ ಪ್ರಮುಖ ದೇವಾಲಯಗಳು:**

1. ವಿರುಪಾಕ್ಷ ದೇವಾಲಯ
2. ಸಂಗಮೇಶ್ವರ ಗುಡಿ
3. ಗಳಗನಾಥನ ಗುಡಿ
4. ಪಾಪನಾಥ ದೇವಾಲಯ
5. ಜೈನ ನಾರಾಯಣ ಗುಡಿ
6. ಜಂಬುಲಿಂಗ ಗುಡಿ
7. ಕಾಡಸಿದ್ಧೇಶ್ವರ ಗುಡಿ
8. ಕಾಶಿವಿಶ್ವನಾಥ ಗುಡಿ
9. ಮಲ್ಲಿಕಾರ್ಜುನ ಗುಡಿ

**1. ವಿರೂಪಾಕ್ಷ ದೇವಾಲಯ (ಶೈವ ದೇವಾಲಯ):**

ಪಟ್ಟದಕಲ್ಲಿನಲ್ಲಿನ ಪ್ರಮುಖ ದೇವಾಲಯ ವಿರೂಪಾಕ್ಷ ದೇವಾಲಯ. ಇದು ವಿಶ್ವವಿಖ್ಯಾತಿ ಪಡೆದಿದೆ. ಇದನ್ನು ಕಲ್ಯಾಣ ಚಾಲುಕ್ಯ ಅರಸ 2ನೇ ವಿಕ್ರಮಾದಿತ್ಯನ ಮಹಾರಾಣಿ ಲೋಕಮಹಾದೇವಿ ತನ್ನ ಪತಿ ಕಾಂಚಿಪಟ್ಟಣವನ್ನು ಮೂರು ಸಾರಿ ಗೆದ್ದುದರ ಸ್ಮರಣಾರ್ಥವಾಗಿ ಕ್ರಿ.ಶ. 740 ರಲ್ಲಿ ನಿರ್ಮಿಸಿದಳೆಂಬುದು ಶಾಸನದಿಂದ ತಿಳಿದು ಬರುತ್ತದೆ. ಈ ದೇವಾಲಯಕ್ಕಿದ್ದ ಮೊದಲಿನ ಹೆಸರು ಲೋಕೇಶ್ವರ ದೇವಾಲಯ. ನಂತರ ಇತ್ತೀಚೆಗೆ ವಿರೂಪಾಕ್ಷ ದೇವಾಲಯವೆಂಬ ಹೆಸರನ್ನು ಪಡೆದಿದೆ. ದೇವಾಲಯದ ಸುತ್ತಲೂ, ಕಲ್ಲುಗಳಿಂದ ನಿರ್ಮಿಸಿದ ಎತ್ತರವಾದ ಪ್ರಾಕಾರದ ಗೋಡೆ, ಇದಕ್ಕೆ ಪೂರ್ವ ಮತ್ತು ಪಶ್ಚಿಮಕ್ಕೆ ಎರಡು ಮಹಾದ್ವಾರಗಳಿವೆ. ದೇವಾಲಯವು ಪೂರ್ವಕ್ಕೆ ಮುಖಮಾಡಿದಂತಿದೆ. ದೇವಾಲಯ ಪ್ರವೇಶಿಸುತ್ತಿದ್ದಂತೆಯೇ ನಂದಿ ಮಂಟಪವಿದೆ. ತದನಂತರ ದೇವಾಲಯದ ಮುಖಮಂಟಪವಿದೆ. ಉತ್ತರ ದಕ್ಷಿಣಗಳಲ್ಲಿ ಬಾಗಿಲು ಹಾಗೂ ಮುಖಮಂಟಪಗಳಿವೆ. ರಂಗಮಂಟಪದ (ನವರಂಗ) ಇಕ್ಕೆಲಗಳಲ್ಲಿ ಉತ್ತರ ದಕ್ಷಿಣಕ್ಕೆ ಮುಖ ಮಾಡಿರುವ ಎರಡು ಚಿಕ್ಕ ಗರ್ಭಗೃಹಗಳು, ಮುಖ್ಯ ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ಗೋಪುರ ಮತ್ತು ಒಳಗಡೆ ಪ್ರದಕ್ಷಿಣ ಪಥವಿದೆ. ರಂಗಮಂಟಪದಲ್ಲಿ (ಮಹಾಮಂಟಪ) ಒಟ್ಟು 18 ಕಂಬಗಳನ್ನೊಳಗೊಂಡಿದೆ. ಈ ರಂಗಮಂಟಪದೊಳಗೆ ಬೆಳಕು ಬರುವುದಕ್ಕಾಗಿ 12 ಜಾಲಂದ್ರಗಳಿವೆ. ಹಾಗೆಯೇ ಪ್ರದಕ್ಷಿಣ ಪಥದಲ್ಲಿಯೂ 6 ಜಾಲಂದ್ರಗಳಿವೆ.

ಈ ದೇವಾಲಯದ ಅಂಗಳ 219 ಅಡಿ ಉದ್ದ, 104 ಅಡಿ ಅಗಲವಾಗಿದೆ. ಪಟ್ಟದಕಲ್ಲಿನ ನಂದಿ ಮಂಟಪದ ಸಮೀಪದ ಶಿಲಾಸ್ತಂಭ ಶಾಸನದಲ್ಲಿ ಉಲ್ಲೇಖವಾಗಿರುವಂತೆ ಗುಂಡ ಅನಿವಾರಿತಾಚಾರ್ಯರು ಎಂಬ ಶಿಲ್ಪಿ ಈ ದೇವಾಲಯದ ಪ್ರಮುಖ ರುವಾರಿಯಾಗಿದ್ದಾನೆ. ಈ ದೇವಾಲಯದ ಗೋಡೆಗಳಲ್ಲಿ ಉಬ್ಬು ಶಿಲ್ಪಗಳು ಕಂಡುಬರುತ್ತವೆ. ನಟರಾಜ, ರಾವಣ, ಉಗ್ರನರಸಿಂಹ, ಅರ್ಧನಾರೀಶ್ವರ, ವಾಮನ ಅವತಾರ ಮುಂತಾದ ಶಿಲ್ಪಗಳು ಗೋಚರಿಸುತ್ತವೆ. ರಾವಣ ಕೈಲಾಸಪರ್ವತವನ್ನು ಎತ್ತುತ್ತಿರುವ ದೃಶ್ಯ ಮೋಹಕವಾಗಿದೆ ಹಾಗೂ ಕಂಬಗಳ ಮೇಲೆ ದೇವತೆಗಳ ಸುಂದರ ಕೆತ್ತನೆಗಳು ಪ್ರವಾಸಿಗರನ್ನು ಆಕರ್ಷಿಸುತ್ತವೆ. ಈ ದೇವಾಲಯ ಪಲ್ಲವರ ಕಾಲದ ಕಂಚಿಯ ಕೈಲಾಸನಾಥ ದೇವಾಲಯದ ಶೈಲಿಯನ್ನು ಅನುಸರಿಸಿ ನಿರ್ಮಿಸಲಾಗಿದೆ. ಇಲ್ಲಿರುವ ಪ್ರತಿಯೊಂದು ದೇವಾಲಯಗಳು ಶಿಲ್ಪಕಲಾ ವೈಭವದಿಂದ ಪ್ರವಾಸಿಗರನ್ನು ಆಕರ್ಷಿಸುತ್ತವೆ. ದೇವಾಲಯದ ಒಳಭಾಗದಲ್ಲಿ ಸೂರ್ಯನ ಚಿತ್ರಣ, ಮಕರ ತೋರಣಗಳು, ಮಿಥುನ ಶಿಲ್ಪಗಳು ಕಂಡುಬರುತ್ತವೆ. ಇವುಗಳು ಹೊಯ್ಸಳ ಹಾಗೂ ವಿಜಯನಗರ ಕಾಲಕ್ಕೆ ಪ್ರಭಾವ ಬೀರುವ ಅಂಶಗಳಾಗಿವೆ. ಈ ದೇವಾಲಯವನ್ನು Sandstone (ಉಸುಕು ಮಿಶ್ರಿತ ಕಲ್ಲು) ಹಾಗೂ ಗ್ರೈನೈಟ್ ಕಲ್ಲಿನಿಂದ ನಿರ್ಮಿಸಲಾಗಿದೆ.

**2. ಸಂಗಮೇಶ್ವರ ಗುಡಿ:**

ಈ ದೇವಾಲಯಕ್ಕೆ ಇದ್ದ ಮೊದಲಿನ ಹೆಸರು ವಿಜಯೇಶ್ವರ ಎಂದಿದ್ದು ಅನಂತರ ಸಂಗಮೇಶ್ವರ ದೇವಾಲಯವಾಗಿ ಪರಿಣಮಿಸಿದೆ. ವಿಜಯಾದಿತ್ಯನು ಈ ಗುಡಿಯನ್ನು ಕಟ್ಟಿಸಿ ತನ್ನ ಹೆಸರಿನ ಲಿಂಗವನ್ನು ಅಲ್ಲಿ ಸ್ಥಾಪಿಸಿದ್ದಾನೆ. ಸಂಗಮೇಶ್ವರ ದೇವಾಲಯದ ಪ್ರಮುಖ ಗರ್ಭಗೃಹ ಇಲ್ಲಿನ ಇತರ ದೇವಾಲಯಗಳಂತೆ ಪೂರ್ವ ದಿಕ್ಕಿನ ಕಡೆಗೆ ಇದೆ. ಆದರೆ ಉತ್ತರ ದಿಕ್ಕಿನಲ್ಲಿ ಈ ದೇವಾಲಯವನ್ನು ಪ್ರವೇಶಿಸುವ ಸೋಪಾನಗಳಿವೆ. ಪ್ರಮುಖ ಗರ್ಭಗೃಹದ ಎರಡು ಪಕ್ಕದಲ್ಲಿಯೂ ಸ್ವಲ್ಪ ಮುಂಭಾಗದಲ್ಲಿ ಉತ್ತರ ದಕ್ಷಿಣಕ್ಕೆ ಮುಖ ಮಾಡಿದ ಇನ್ನೆರಡು ಚಿಕ್ಕ ಗರ್ಭಗೃಹಗಳು ಎದುರು ಬದರಾಗಿವೆ. ಗರ್ಭಗೃಹದ ಸುತ್ತಲೂ ಪ್ರದಕ್ಷಿಣ ಪಥವಿದೆ. ಈ ಗರ್ಭಗೃಹದ ಮುಂದೆ ನವರಂಗ ಬರುತ್ತದೆ. ರಂಗ ಮಂಟಪವು (ನವರಂಗದ) ಪೂರ್ವ ಪಶ್ಚಿಮದಲ್ಲಿ ಐದೈದು ಕಂಬಗಳಿಂದ ಕೂಡಿದ ಮೂರು ಸಾಲು ಕಂಬಗಳನ್ನೊಳಗೊಂಡಿದೆ.

**3. ಗಳಗನಾಥ ಗುಡಿ (ಶೈವ ದೇವಾಲಯ):**

ಗಳಗನಾಥ ದೇವಾಲಯಕ್ಕೆ ಔತ್ತರೇಯ ಶಿಖರವಿದೆ. ಶಿಖರದ ನಾಲ್ಕು ಮೂಲೆಗಳಲ್ಲಿಯೂ ಆಮಲಕಗಳು. ಅದರ ಮೇಲೆ ಸಾದಾ ಸೋಪಾನಗಳಿವೆ. ಮತ್ತೆ ಅದರ ಮೇಲೆ ಆಮಲಕಗಳು, ಅದರ ಮೇಲೆ ನಾರಿಕೇಳ ಕಳಶ. ಗರ್ಭಗುಡಿಯಲ್ಲಿ ಕರಿಯ ಕಲ್ಲಿನ ಲಿಂಗವಿದೆ.

**4. ಪಾಪನಾಥ ದೇವಾಲಯ (ಶೈವ ದೇವಾಲಯ):**

ಮಲಪ್ರಭಾ ನದಿಯ ದಡದ ಮೇಲೆ ಪೂರ್ವಕ್ಕೆ ಮುಖಮಾಡಿ ಈ ದೇವಾಲಯ ನಿಂತಿದೆ. ಗರ್ಭಗುಡಿ, ಸುಕನಾಸಿ, ಪ್ರದಕ್ಷಿಣ ಪಥ, ರಂಗಮಂಟಪ (ನವರಂಗ) ಮತ್ತು ಮುಖಮಂಟಪಗಳು ಕಾಣುತ್ತವೆ. ಗರ್ಭಗುಡಿಯಲ್ಲಿ ಪಾಪನಾಥ ಲಿಂಗವಿದೆ. ಸುಕನಾಸಿಯಿಂದ ಗರ್ಭಗೃಹವನ್ನು ಸುತ್ತಿ ಬರಲು ಪ್ರದಕ್ಷಿಣ ಪಥವಿದೆ. ರಂಗಮಂಟಪವು 16 ಪೂರ್ಣ ಕಂಬಗಳನ್ನೊಳಗೊಂಡಿದೆ. ಮುಖಮಂಟಪದ ನಂತರ ಬರುವ ನಾಲ್ಕು ಕಂಬಗಳು ನಂದಿಮಂಟಪವಿದೆ. ಇವುಗಳ ಮಧ್ಯದಲ್ಲಿ ನಂದಿ, ಪಾಪನಾಥನಿಗೆ ಎದುರಾಗಿ ಕುಳಿತಿದೆ. ಈ ದೇವಾಲಯಕ್ಕೆ ಔತ್ತರೇಯ (ನಾಗರ) ರೀತಿಯ ಶಿಖರವಿದೆ. ಈ ಶಿಖರದ ಮೇಲೆ ಕಳಶವಿಲ್ಲ.

10–15 ಸೋಪಾನಗಳನ್ನೇರಿ ದೇವಾಲಯದ ಮುಖಮಂಟಪವನ್ನು ಉತ್ತರ – ದಕ್ಷಿಣ ಎರಡು ಕಡೆಯಿಂದ ಪ್ರವೇಶಿಸುವ ಸೋಪಾನಗಳಿವೆ.

**5. ಜೈನ ನಾರಾಯಣ ಗುಡಿ (ಜೈನ ದೇವಾಲಯ):**

ಜೈನ ನಾರಾಯಣ ಗುಡಿ (ಸೂಳಿಗುಡಿ) ಯು ಮುಖಮಂಟಪ, ರಂಗಮಂಟಪ (ನವರಂಗ), ಗರ್ಭಗೃಹ, ಪ್ರದಕ್ಷಿಣ ಪಥ ಒಳಗೊಂಡಿದೆ. ಇದನ್ನು ರಂಗಮಂಟಪಕ್ಕೆ ನಾಲ್ಕು ಕಂಬಗಳ ಒಂದು ಸಣ್ಣ ಹಜಾರ ಸೇರಿಸುತ್ತದೆ. ರಂಗಮಂಟಪದ ಮುಂದೆ ಅದರ ಗೋಡೆಗೆ ಸೇರಿದಂತೆಯೇ ಮುಖಮಂಟಪವಿದೆ. ಗರ್ಭಗೃಹದ ಮೇಲೆ ಇನ್ನೊಂದು ಗರ್ಭಗೃಹವಿದೆ. ಹೊರಗೋಡೆಯ ಮೇಲಿರುವ ಶಿಲ್ಪಾಕೃತಿಗಳಿಂದ ಇದು ಜೈನ ದೇವಾಲಯವೆಂದು ಹೇಳಬಹುದಾಗಿದೆ. ಮುಖಮಂಟಪದ ಕಂಬಗಳ ರಚನೆ, ರಂಗಮಂಟಪದ ಕಂಬಗಳಿಗಿಂತ ಭಿನ್ನವಾಗಿದೆ. ಮುಖಮಂಟಪದ ಕಂಬಗಳು ದಂಡಾಕೃತಿಯ ಆಕಾರದವುಗಳಾಗಿವೆ. ಕಂಬಗಳನ್ನು ಒಳಗೊಂಡ ಬೋದುಗೆಗಳು ದುಂಡಾದ ತಲೆದಿಂಬಿನ ಆಕಾರದಲ್ಲಿವೆ.

**6. ಮಲ್ಲಿಕಾರ್ಜುನ ದೇವಾಲಯ (ಶೈವ ದೇವಾಲಯ):**

ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯ ರಚನೆಯಾದ ಎಲ್ಲ ರೀತಿಯಿಂದಲೂ ಅನುಕರಿಸಿ ನಿರ್ಮಿತವಾಗಿರುವ ಮತ್ತೊಂದು ಪ್ರಮುಖ ದೇವಾಲಯವೇ ಮಲ್ಲಿಕಾರ್ಜುನ ದೇವಾಲಯ. ಇದನ್ನು 2ನೇ ವಿಕ್ರಮನ ದ್ವಿತೀಯ ರಾಣಿ ತ್ರೈಲೋಕ್ಯ ಮಹಾದೇವಿ ಕಟ್ಟಿಸಿದ್ದಾಳೆ. ಇದನ್ನು ಬಿಟ್ಟರೆ ಉಳಿದ ಎಲ್ಲ ವಿಷಯಗಳಲ್ಲಿ ಏಕರೂಪತೆಯನ್ನು ಹೊಂದಿದೆ. ಈ ದೇವಾಲಯ ದ್ರಾವಿಡ ಶೈಲಿಗೆ ಉತ್ತಮ ಮಾದರಿಯಾಗಿದ್ದು, ದೇವಾಲಯವು ಗರ್ಭಗೃಹ, ಅಂತರಾಳ, ಸಭಾಮಂಟಪ, ಮುಖಮಂಟಪಗಳನ್ನು ಒಳಗೊಂಡ ಸಮಗ್ರ ಯೋಜನೆಯನ್ನು ಹೊಂದಿದೆ. ಗರ್ಭಗುಡಿ ಪ್ರದಕ್ಷಣ ಪಥವಿದೆ. ದೇವಾಲಯದ ಆವರಣದಲ್ಲಿ ದೊರೆತಿರುವ ಶಿಲಾಶಾಸನ ಪ್ರಕಾರ ತ್ರೈಲೋಕ್ಯ ಮಹಾದೇವಿ ಈ ದೇವಾಲಯ ನಿರ್ಮಿಸುವುದರ ಜೊತೆಗೆ ದಾನ ದತ್ತಿಗಳನ್ನು ಹಾಗೂ ಸಂಗೀತ ನೃತ್ಯ ಸೇವೆಗಳ ಉಲ್ಲೇಖಗಳನ್ನು ಒಳಗೊಂಡಿದೆ. ಸುಕನಾಸಿಯ ಮುಂಭಾಗದಲ್ಲಿರುವ ಸಭಾಮಂಟಪ ವಿಶಾಲವಾಗಿದ್ದು ವಿವಿಧ ಶೈಲಿಯ ಕಂಬಗಳನ್ನು ಒಳಗೊಂಡಿದೆ. ಪ್ರತಿ ಮಂಟಪ ಛಾವಣಿಯಲ್ಲಿ ಭುವನೇಶ್ವರಿ ಆಕರ್ಷಕವಾಗಿದೆ. ಗೋಡೆಗಳ ಮೇಲೆ ಶಿವನ ಪೌರಾಣಿಕ ಕಥೆಗಳು, ಗಿರಿಜಾ ಕಲ್ಯಾಣ, ದುರ್ಗಾ ಮಹಿಷಾಸುರ ಮರ್ದಿನಿ, ವಿಷ್ಣುವಿನ ದಶಾವತಾರಗಳು ಮುಂತಾದ ಶಿಲ್ಪಗಳು ಕಂಡುಬರುತ್ತವೆ.

**7. ಕಾಶಿ ವಿಶ್ವನಾಥ ದೇವಾಲಯ (ಶೈವ ದೇವಾಲಯ):**

ಕಾಶಿ ವಿಶ್ವನಾಥ ದೇವಾಲಯದ ಗಮನಾರ್ಹ ಅಂಶವೆಂದರೆ ಅದರಲ್ಲಿ ಕಂಡುಬರುವ ಔತ್ತರೇಯ ಪದ್ಧತಿಯ ಪ್ರಭಾವ ಮುಖ್ಯವಾಗಿ ಶಿಖರ. ಗರ್ಭಗೃಹ ಮತ್ತು ಅದರ ಮುಂದೆ ನಿರ್ಮಿತವಾದ ವಿಸ್ತಾರವಾದ ಒಂದು ರಂಗಮಂಟಪವೇ ಇದರ ಮುಖ್ಯ ರಚನೆ. ಗರ್ಭಗೃಹದಲ್ಲಿ ಎರಡು ಗೋಡೆಗಳ ಮುಂದೆ ಚಾಚಿ ಸುಕನಾಸಿಯಂತಹ ರಚನೆಗೆ ಕಾರಣವಾಗಿವೆ. ಪ್ರದಕ್ಷಿಣ ಪಥವಿಲ್ಲ. ಗರ್ಭಗೃಹದ ಮುಂದಿನ ಮಂಟಪದಲ್ಲಿ ಅರ್ಧ ಕಂಬಗಳನ್ನು ಬಿಟ್ಟರೆ ಮಧ್ಯದಲ್ಲಿ ನಾಲ್ಕು ಕಂಬಗಳು ಮಾತ್ರ ಪ್ರಧಾನವಾಗಿವೆ. ಗರ್ಭಗುಡಿಯಲ್ಲಿ ಶಿವಲಿಂಗವಿದೆ. ದೇವಾಲಯದ ಮುಂದೆಗಡೆಯಲ್ಲಿ ನಂದಿಯಿದೆ. ದೇವಾಲಯದ ಒಳಭಾಗ ಹಾಗೂ ಹೊರಭಾಗಗಳಲ್ಲಿ ಕೆಲವು ಶಿಲ್ಪಾಕೃತಿಗಳಿವೆ.

**ಪಟ್ಟದಕಲ್ಲಿನ ಸ್ಮಾರಕಗಳ ರಕ್ಷಣೆಯ ಜವಾಬ್ದಾರಿಗಳು:**

1. ಪಟ್ಟದಕಲ್ಲಿನ ದೇವಾಲಯಗಳು ಭಾರತೀಯ ಪುರಾತತ್ವ ಸಮೀಕ್ಷೆ (Archaeological Survey of India – ASI) ಅವರ ಅಧೀನದಲ್ಲಿದೆ.
2. ಸ್ಥಳೀಯ ಮಟ್ಟದಲ್ಲಿ ಕರ್ನಾಟಕ ರಾಜ್ಯ ಪುರಾತತ್ವ ಇಲಾಖೆ ಸಹ ಸಹಕಾರ ನೀಡುತ್ತಿದೆ.
3. ಪಟ್ಟದಕಲ್ಲನ್ನು 1987 ರಲ್ಲಿ ಯುನೆಸ್ಕೊ ವಿಶ್ವ ಪಾರಂಪರ್ಯ ತಾಣ ಎಂದು ಘೋಷಿಸಲಾಗಿದೆ.
4. ಇವುಗಳ ರಕ್ಷಣೆ ಮತ್ತು ನಿರ್ವಹಣೆ ಅಂತರಾಷ್ಟ್ರೀಯ ಮಟ್ಟದ ಜವಾಬ್ದಾರಿ ಕೂಡ ಆಗಿದೆ.
5. ಸ್ಮಾರಕಗಳಿಗೆ ಹಾನಿಯಾಗದಂತೆ ಪ್ರವಾಸೋದ್ಯಮವನ್ನು ನಿಯಂತ್ರಿಸಬೇಕು.
6. ಪ್ರಾಚೀನ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಕಾಯ್ದೆ 1958 ರಲ್ಲಿ ಜಾರಿಗೊಳಿಸಲಾಯಿತು.
7. ದೇವಾಲಯಗಳ ಸುತ್ತ ಒಂದು ನೂರು ಮೀಟರ್ ವ್ಯಾಪ್ತಿಯೊಳಗೆ ಹೊಸ ಕಟ್ಟಡ ನಿಷೇಧ ಮಾಡಲಾಗಿದೆ.
8. ಪ್ರವಾಸಿಗರಿಗೆ ಮಾಹಿತಿ ಫಲಕಗಳು, ಮಾರ್ಗಸೂಚಿ ಪುಸ್ತಕಗಳು ಅವಶ್ಯಕವಾಗಿವೆ.

**ಸಮಾರೋಪ:**

ಬಾಗಲಕೋಟೆ ಜಿಲ್ಲೆಯ ಐತಿಹಾಸಿಕ ಸ್ಥಳವಾದ ಪಟ್ಟದಕಲ್ಲು ಬಾದಾಮಿ ಚಾಲುಕ್ಯರ ವಾಸ್ತುಶಿಲ್ಪದ ಕೇಂದ್ರವಾಗಿದ್ದು, ಇದು ಹಲವಾರು ದೇವಾಲಯಗಳನ್ನು ಒಳಗೊಂಡಿದೆ. ಜೊತೆಗೆ 1987 ರಲ್ಲಿ ವಿಶ್ವಪಾರಂಪರಿಕ ತಾಣವಾಗಿ ಘೋಷಿಸಲಾಯಿತು. ಇಲ್ಲಿರುವ 10 ದೇವಾಲಯಗಳಲ್ಲಿ ಮಲ್ಲಿಕಾರ್ಜುನ ಮತ್ತು ವಿರೂಪಾಕ್ಷ ದೇವಾಲಯವು ಅತಿ ಮುಖ್ಯವಾಗಿದ್ದು, ಇವು ಪ್ರವಾಸಿಗರನ್ನು ಆಕರ್ಷಿಸುತ್ತವೆ. ಅಂತಹ ದೇವಾಲಯಗಳ ಕುರಿತು ಈ ಮೇಲೆ ಸಂಪೂರ್ಣವಾದ ಮಾಹಿತಿಯನ್ನು ವಿವರಿಸಲಾಗಿದೆ.

**ಪರಾಮರ್ಶನ ಗ್ರಂಥಗಳು:**

1. Sundar A., (2008), Pattadakala. Publisher: Archaeological Survey Of India.
2. Jeorge Mishell., (2004), Badami. Aihole. Pattadakal. Jaico Publishing House.
3. Jeorge Mishell., (2002), Pattadakala, Monumental Legacy. Publisher: Oxford University.
4. Aditi Shah., (2020), Pattadakala : Cradle of Architecture.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.